# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.

'ನಿರ್ಮಾಣ ಭವನ' ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010

www.souharda.coop, Ph: 080–23378375–80 Email:souharda@souharda.coop


## ಟಾಸ್ಕ್ ಪೋರ್ಸ್ ಎಂಪೆನಲ್‌ಮೆಂಟ್

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಮೂಲಕ ರಚನೆಯಾದ, ಸೌಹಾರ್ದ ಸಹಕಾರಿಗಳ ಮೇಲೆ ನಿಯಂತ್ರಣಾಧಿಕಾರ ಹೊಂದಿರುವ ಶಾಸನಬದ್ಧ ಸಹಕಾರಿ ಸಂಸ್ಥೆಯಾಗಿದೆ. ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಮೇಲೆ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ ಟಾಸ್ಕ್ ಫೋರ್ಸ್ ಎಂಪೆನಲ್‌ಮೆಂಟ್ ರಚಿಸಲು ಆಡಳಿತ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಟಾಸ್ಕ್ ಫೋರ್ಸ್ ಕಾರ್ಯಚಟುವಟಿಕೆಗಳ ಅಗತ್ಯಕ್ಕೆ ತಕ್ಕಂತೆ ಆಯಾ ಜಿಲ್ಲೆಯಲ್ಲಿ ಲಭ್ಯವಿರುವ ಸನ್ನದು ಲೆಕ್ಕಪರಿಶೋಧಕರು, ವಕೀಲರು, ನಿವೃತ್ತ ಸಹಕಾರ ಇಲಾಖಾಧಿಕಾರಿಗಳು, ನಿವೃತ್ತ ಪೋಲೀಸ್ ಅಧಿಕಾರಿಗಳು, ನಿವೃತ್ತ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಅಧಿಕಾರಿಗಳ ಸೇವೆಯನ್ನು ಪಡೆಯಲು ಸಾಧ್ಯವಾಗುವಂತೆ ತಜ್ಞರುಗಳ ಎಂಪೆನಲ್‌ಮೆಂಟ್ ರಚಿಸಲಾಗುತ್ತಿದ್ದು, ಪ್ರಕಟಣೆಯನ್ನು ದಿನಾಂಕ: 05.03.2021 ರಂದು ನೀಡಲಾಗಿದ್ದು, ಷರತ್ತುಗಳು ಈ ಕೆಳಗಿನಂತಿರುತ್ತವೆ.

**1. ಸಾಮಾನ್ಯ ಷರತ್ತುಗಳು:**

1. ಭಾರತೀಯ ನಾಗರೀಕನಾಗಿರತಕ್ಕದ್ದು.
2. ಕನ್ನಡ ಮತ್ತು ಇಂಗ್ಲೀಷ್ ಭಾಷೆ ಕಡ್ಡಾಯವಾಗಿ ಓದಲು ಮತ್ತು ಬರೆಯಲು ಬರತಕ್ಕದ್ದು.
3. ವಯೋಮಿತಿ ಗರಿಷ್ಠ 68 ವರ್ಷ ಮೀರತಕ್ಕದ್ದಲ್ಲ.
4. ಯಾವುದೇ ಇಲಾಖಾ ವಿಚಾರಣೆಗಳು ಬಾಕಿ ಇರತಕ್ಕದ್ದಲ್ಲ ಅಥವಾ ಇಲಾಖಾ ವಿಚಾರಣಾ ನಡೆದು ತಪ್ಪಿತಸ್ಥರು ಎಂದು ಘೋಷಣೆಯಾಗಿ ಶಿಕ್ಷೆಗೆ ಒಳಪಟ್ಟಿರತಕ್ಕದ್ದಲ್ಲ.
5. ಯಾವುದೇ ರೀತಿಯ ದೀರ್ಘಕಾಲದ ಗಂಭೀರ ಆರೋಗ್ಯದ ಸಮಸ್ಯೆಯನ್ನು ಹೊಂದಿರತಕ್ಕದ್ದಲ್ಲ.
6. ನೈತಿಕ ಅಧಪತನಕ್ಕೆ ಒಳಪಡುವ ಯಾವುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ಣಿತ ಅಪರಾಧಿಯಾಗಿರಬಾರದು.

**2. ತಜ್ಞರ ಅರ್ಹತಾ ವಿವರಗಳು:**

1. ಟಾಸ್ಕ ಫೋರ್ಸ್‌ನಲ್ಲಿ ಕಾರ್ಯನಿರ್ವಹಿಸಲು ಅರ್ಜಿ ಸಲ್ಲಿಸುವ ವೃತ್ತಿನಿರತ ಸನ್ನದು ಲೆಕ್ಕಪರಿಶೋಧಕರು ಸಹಕಾರ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ಕನಿಷ್ಠ 3 ರಿಂದ 5 ವರ್ಷಗಳ ಅನುಭವ ಹೊಂದಿರಬೇಕು.

2. ಟಾಸ್ಕ ಫೋರ್ಸನಲ್ಲಿ ಕಾರ್ಯನಿರ್ವಹಿಸಲು ಅರ್ಜಿ ಸಲ್ಲಿಸುವ ವೃತ್ತಿನಿರತ ವಕೀಲರು, ವಕೀಲರ ವೃತ್ತಿಯಲ್ಲಿ ಕನಿಷ್ಠ 3 ರಿಂದ 5 ವರ್ಷಗಳ ಸೇವೆ ಸಲ್ಲಿಸಿರಬೇಕು.
3. ಟಾಸ್ಕ ಫೋರ್ಸನಲ್ಲಿ ಕಾರ್ಯನಿರ್ವಹಿಸಲು ಅರ್ಜಿ ಸಲ್ಲಿಸುವ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ನಿವೃತ್ತ ಅಧಿಕಾರಿಯು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಹಿರಿಯ ಲೆಕ್ಕಪರಿಶೋಧಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರಬೇಕು.
4. ಟಾಸ್ಕ ಫೋರ್ಸನಲ್ಲಿ ಕಾರ್ಯನಿರ್ವಹಿಸಲು ಅರ್ಜಿ ಸಲ್ಲಿಸುವ ಸಹಕಾರ ಇಲಾಖೆಯ ನಿವೃತ್ತ ಅಧಿಕಾರಿಯು ಹಿರಿಯ ಪರಿವೀಕ್ಷಕ (ಸೀನಿಯರ್ ಇನ್ಸ್‌ಫೆಕ್ಟರ್) ಹುದ್ದೆಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿ ನಿವೃತ್ತರಾಗಿರಬೇಕು.
5. ಟಾಸ್ಕ ಫೋರ್ಸನಲ್ಲಿ ಕಾರ್ಯನಿರ್ವಹಿಸಲು ಅರ್ಜಿ ಸಲ್ಲಿಸುವ ನಿವೃತ್ತ ಪೊಲೀಸ್ ಅಧಿಕಾರಿಯು ಆರಕ್ಷಕ ಉಪ ನಿರೀಕ್ಷಕರ ಹುದ್ದೆಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿ ನಿವೃತ್ತರಾಗಿರಬೇಕು.

*********